



# ವಿಚಿತ್ರ ಸಾಹಸಿ..!



ಚೀನಾದ ಯಾಂಗ್ ಗ್ವಾಂಘೆ ಮಹಾನ್ ಸಾಹಸಿ. ದುಸ್ಸಾಹಸಿ ಎಂದು ಕರೆದರೂ ತಪ್ಪೇನಿಲ್ಲ. ಈತ ಇತ್ತೀಚೆಗೆ ಕಾರೊಂದನ್ನು ಎಳೆದು ಬಲು ದೊಡ್ಡ ಸುದ್ದಿ ಮಾಡಿದ್ದಾನೆ. ಕಾರನ್ನು ಎಳೆಯುವುದೇನೂ ಅಷ್ಟೊಂದು ದೊಡ್ಡ ಸಾಹಸದ ಕೆಲಸವಲ್ಲ; ಆದರೆ ಗ್ವಾಂಘೆ 1.6 ಟನ್ (1600 ಕೆ.ಜಿ )ತೂಕದ ಮರ್ಸಿಡಿಸ್ ಬೆಂಜ್ ಕಾರನ್ನು ಎಳೆದಿದ್ದು ಹೇಗೆ ಗೊತ್ತೇ? ತುಂಬಾ ಸೂಕ್ಷ್ಮ ಅಂಗವೆನಿಕೊಂಡಿರುವ ಕಣ್ರೆಪ್ಪೆಗಳಿಂದ. 'ಈ ರೀತಿ ಎಳೆಯಲು ಕೆಳ ರೆಪ್ಪೆಗಳಿಗೆ ಹುಕ್ ಅನ್ನು ಸಿಕ್ಕಿಸಿಕೊಳ್ಳುವಾಗ ಮೊದ ಮೊದಲು ತುಂಬಾ ನೋವಾಯಿತು, ನಂತರ ಅದಕ್ಕೆ ಒಗ್ಗಿ ಹೋದೆ' ಎಂದು 37ರ ಹರೆಯದ ಗ್ವಾಂಘೆ ಹೇಳುತ್ತಾನೆ.

ಕಳೆದ 10 ವರ್ಷಗಳಿಂದಲೂ ಇದನ್ನು ಅಭ್ಯಾಸ ಮಾಡುತ್ತಿದ್ದನಂತೆ. ಇಂತಹ ಅಪಾಯಕಾರಿ ಕೆಲಸಕ್ಕೆ ಕೈ ಹಾಕಿದ್ದೇಕೆ? ಎಂದು ಪತ್ರಕರ್ತರು ಪ್ರಶ್ನಿಸಿದಾಗ, 'ದೇಹದ ಅತ್ಯಂತ ದುರ್ಬಲ ಅಂಗವನ್ನು ಪರೀಕ್ಷೆ ಮಾಡುವುದಕ್ಕಾಗಿ' ಎಂದು ಉತ್ತರಿಸಿದನಂತೆ.

ಈತನ ಅಭಿಮಾನಿಗಳಿಗೆ ಇದೇನೂ ಅಚ್ಚರಿಯನ್ನುಂಟು ಮಾಡಲಿಲ್ಲ. ಏಕೆಂದರೆ 2010ರಲ್ಲಿ ಈತ ನೀರು ತುಂಬಿದ ಎರಡು ಬಕೆಟ್‌ಗಳನ್ನು ಕಣ್ರೆಪ್ಪೆಗಳಿಂದ ಎತ್ತಿ ಗಿನ್ನೆಸ್ ವಿಶ್ವ ದಾಖಲೆ ಮಾಡಿದ್ದ. ಬೀಜಿಂಗ್‌ನ ದೇವಾಲಯದ ಉತ್ಸವ ಸಂದರ್ಭದಲ್ಲಿ 5 ಜನರು ಕುಳಿತುಕೊಂಡಿದ್ದ ಟ್ರೈಸಿಕಲ್ಲನ್ನು ತನ್ನ ರೆಪ್ಪೆಗಳಿಂದಲೇ ಎಳೆದಿದ್ದ.

ಈತನ ಬತ್ತಳಿಕೆಯಲ್ಲಿ ನೋಡುಗರು ಬೆಚ್ಚಿಬೀಳುವಂಥ ಸುಮಾರು 30ಕ್ಕೂ ಹೆಚ್ಚು ಸಾಹಸ ಕಾರ್ಯಗಳಿವೆ. ಟೇಬಲ್ ಮೇಲೆ ಉರಿಯುತ್ತಿರುವ ನಾಲ್ಕು ಬಲ್ಬ್‌ಗಳ ಮೇಲೆ ಹಲಗೆಯನ್ನು ಇಡುತ್ತಾನೆ. ಹಲಗೆಯ ಮೇಲೆ ಭಾರೀ ಹರಿತವಾದ ಎರಡು ಚಾಕುಗಳನ್ನು ಮೇಲ್ಮುಖವಾಗಿ ಇಟ್ಟು, ಅದರ ಮೇಲೆ ಬರಿಗಾಲಿನಲ್ಲಿ ನಿಲ್ಲುತ್ತಾನೆ. ಹಾಗೆ ನಿಂತು ಕಣ್ಣಿನ ಕೆಳ ರೆಪ್ಪೆಗಳಿಂದ ನೀರು ತುಂಬಿದ ಭಾರವಾದ ಬಕೆಟ್‌ಗಳನ್ನು ಎತ್ತುತ್ತಾನೆ. ಜೊತೆಗೆ ಪುಂಗಿಯನ್ನೂ ಸಹ ಊದುತ್ತಾನೆ. ಹಾವುಗಳನ್ನು ಮೂಗಿನಿಂದ ತೂರಿಸಿ ಬಾಯಿಯಿಂದ ಹೊರಗೆ ಎಳೆಯಬಲ್ಲ. ಕಣ್ಣಿನ ರೆಪ್ಪೆಯಿಂದ ಮಾಡುವ ಸಾಹಸವನ್ನು ನೋಡುತ್ತಿರುವವರಿಗೆ ಕಣ್ಣಿನಲ್ಲಿ ನೀರು ಬರುವುದು ಗ್ಯಾರಂಟಿ.

■ **ವಿದ್ಯಾ ವಿ ಹಾಲಭಾವಿ**